**ಸಾಕ್ಷಿಯನ್ನು ದಿಃ 03.01.2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ನಾನು ದ್ವಿತೀಯ ಪಿ.ಯು.ಸಿ. ಓದಿರುತ್ತೇನೆ. 2014 ನೇ ಇಸವಿಯಲ್ಲಿ ಪಿ.ಯು.ಸಿ. ಮುಗಿಸಿರುತ್ತೇನೆ. ಊಟಗಳ್ಳಿಯಿಂದ ಕೆ.ಆರ್.ಎಸ್. ಗೆ 15 ಕಿ.ಮೀ ದೂರ ಇದೆ. ನಾನು ಊಟಗಳ್ಳಿಯಿಂದ ಕೆ.ಆರ್.ಎಸ್. ಗೆ ದಿನ ಕಾಲೇಜಿಗೆ ಹೋಗಿ ಬರುತ್ತಿದ್ದೆ. 2015 ರಲ್ಲಿ ದರ್ಶನ್ ಫ್ಲೆಕ್ಸಿಬಲ್ ನಲ್ಲಿ ಕೆಲಸ ಮಾಡುತ್ತಿದ್ದೆ. ಸದರಿ ಕಂಪನಿಯಲ್ಲಿ ಒಂದು ವರ್ಷ ಕೆಲಸ ಮಾಡಿರುತ್ತೇನೆ. ಅಪಘಾತ ಸಮಯದಲ್ಲಿ ಶಿವ ಆಗ್ರೋ ಇಂಡಸ್ಟ್ರೀಸ್ ನಲ್ಲಿ ಕೆಲಸ ಮಾಡುತ್ತಿದ್ದೆ. ನನಗೆ ಆಧಾರ್ ಕಾರ್ಡ್ ,ಪಾನ್ ಕಾರ್ಡ್ , ಡಿ.ಎಲ್ ಹಾಗೂ ಬ್ಯಾಂಕ್ ಅಕೌಂಟ್ ಇದೆ. ನನಗೆ ಎಸ್.ಬಿ.ಐ ಕೆ.ಆರ್.ಎಸ್. ಬ್ರಾಂಚ್ ನಲ್ಲಿ ಖಾತೆ ಇದೆ.

ದರ್ಶನ್ ಫ್ಲೆಕ್ಸಿಬಲ್ ಹಾಗೂ ಶಿವ ಆಗ್ರೋ ಇಂಡಸ್ಟ್ರೀಸ್ ನಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ನೇಮಕಾತಿ ಪತ್ರ ನೀಡಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಕೇಳಬೇಕು ಎಂದು ಉತ್ತರಿಸಿರುತ್ತಾರೆ. ದರ್ಶನ್ ಫ್ಲೆಕ್ಸಿಬಲ್ ನಲ್ಲಿ 150-200 ಜನ ಕೆಲಸ ಮಾಡುತ್ತಿದ್ದರು. ಶಿವ ಆಗ್ರೋ ಇಂಡಸ್ಟ್ರೀಸ್ ನಲ್ಲಿಯೂ ಸಹ ಅಷ್ಟೇ ಜನ ಕೆಲಸ ಮಾಡುತ್ತಿದ್ದರು. ಶಿವ ಆಗ್ರೋ ಇಂಡಸ್ಟ್ರೀಸ್ ನಲ್ಲಿ ರಾಸಾಯನಿಕ ಉತ್ಪನ್ನ ಮಾಡುವ ಇಂಡಸ್ಟ್ರಿ ಆಗಿರುತ್ತದೆ. ಸದರಿ ಕಂಪನಿಯಿಂದ ಪಿಎಫ್, ಇಎಸ್ಐ ಸೌಲಭ್ಯ ಇದೆ ಎಂದರೆ ಸರಿ. ಇ.ಎಸ್ಐ ಕಾರ್ಡ್ ಹಾಜರು ಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ನನ್ನ ಸಂಬಳದಿಂದ ಇ.ಎಸ್ ಐ ಭತ್ಯೆ ಕಡಿತ ಮಾಡುತ್ತಿದ್ದರು ಎಂದು ಉತ್ತರಿಸಿರುತ್ತಾರೆ. ಪ್ರತಿಯೊಬ್ಬ ನೌಕರನಿಗೂ ಇ.ಎಸ್ಐ ಸಂಖ್ಯೆ ನೀಡುತ್ತಾರೆ ಎಂದರೆ ಸರಿ. ಯಾವುದೇ ಒಬ್ಬ ನೌಕರನು ಆರೋಗ್ಯ ಸರಿ ಇಲ್ಲದೆ ಇದ್ದಾಗ, ಅಪಘಾತ ಆದಾಗ ಹಾಗೂ ರಜೆ ಹಾಕಿದಾಗ ಇ.ಎಸ್ಐ ನಿಂದ ಸಂಬಳವನ್ನು ನೀಡುತ್ತಿದ್ದಾರೆ ಎಂದರೆ ಆ ಬಗ್ಗೆ ಮಾಹಿತಿ ಇಲ್ಲ. ಆಸ್ಪತ್ರೆಯ ಖರ್ಚನ್ನು ಇ.ಎಸ್ಐ ರವರು ಭರಿಸುತ್ತಾರೆ ಎಂದರೆ ಆ ಬಗ್ಗೆ ಗೊತ್ತಿಲ್ಲ. ನ್ಯಾಯಾಲಯಕ್ಕೆ ಬಿಲ್ಲುಗಳ ಪ್ರತಿಯನ್ನು ಹಾಜರು ಪಡಿಸಿರುತ್ತೇನೆ ಎಂದರೆ ಸರಿ. ಮೂಲ ದಾಖಲೆಗಳನ್ನು ಇ.ಎಸ್ಐ ರವರಿಂದ ಆಸ್ಪತ್ರೆ ವೆಚ್ಚ ಪಡೆದುಕೊಳ್ಳಲು ಹಾಜರು ಪಡಿಸಿದ ಕಾರಣ ನ್ಯಾಯಾಲಯಕ್ಕೆ ಬಿಲ್ಲುಗಳ ಪ್ರತಿಯನ್ನು ಹಾಜರು

ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಬಿಲ್ಲುಗಳ ವೆಚ್ಚವನ್ನು ಪಡೆದುಕೊಳ್ಳಲು ಮೂಲ ಬಿಲ್ಲುಗಳು ತಾತನ ಬಳಿ ಇದ್ದು ಕಳೆದು ಹೋಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರ ಸರಿಯಲ್ಲ.

ತಿಂಗಳಿಗೆ 12,000/– ಸಂಬಳ ಪಡೆಯುತ್ತಿದ್ದೆ ಎಂದು ತೋರಿಸಲು ದಾಖಲೆ ಇಲ್ಲ. ನನ್ನ ಪ್ರಮಾಣ ಪತ್ರದಲ್ಲಿ ನಾನು ಈಗ ಸಿ.ಇ.ಎಸ್.ಸಿ. ಹಿನಕಲ್ ನಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು ಬರೆದಿರುತ್ತೇನೆ ಎಂದರೆ ಸರಿ. ಸದರಿ ಕಂಪನಿಯಲ್ಲಿ ಮೂರು ವರ್ಷದಿಂದ ಕೆಲಸ ಮಾಡುತ್ತಿದ್ದೇನೆ. ಅಲ್ಲಿ ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ದಾಖಲೆ ಹಾಜರು ಪಡಿಸಲು ತೊಂದರೆ ಇಲ್ಲ. ಸಂಬಳವನ್ನು ನನ್ನ ಬ್ಯಾಂಕ್ ಖಾತೆಗೆ ಬರುತ್ತದೆ. ಬ್ಯಾಂಕ್ ಪಾಸ್ ಬುಕ್ ಅಥವಾ ಸ್ಟೇಟ್ ಮೆಂಟ್ ಅನ್ನು ಹಾಜರು ಪಡಿಸಲು ತೊಂದರೆ ಇಲ್ಲ. ದಿಃ 05.06.2016 ರಿಂದ ದಿಃ 16.06.2016 ರ ತನಕ ಬೃಂದಾವನ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರಲಿಲ್ಲ. ಮುಂದುವರೆದು ಪ್ರತಿ ತಿಂಗಳು ಮುಂದುವರೆದ ಚಿಕಿತ್ಸೆಗೆ ಹೋಗುತ್ತಿದ್ದೆ ಎಂದು ಉತ್ತರಿಸಿರುತ್ತಾರೆ. ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ದಾಖಲೆಗಳನ್ನು ಬಿಟ್ಟರೆ ನನ್ನ ಚಿಕಿತ್ಸೆಗೆ ಸಂಬಂಧಪಟ್ಟಂತೆ ಬೇರೆ ಯಾವ ದಾಖಲೆಯು ಇಲ್ಲ. ವೈಧ್ಯರು ಅಂಗನ್ಯೂನತೆ ಪ್ರಮಾಣ ಪತ್ರ ನೀಡಿರುವುದಿಲ್ಲ. ಸಿ.ಇ.ಎಸ್.ಸಿ ಕಂಪನಿಗೆ ಸೇರುವ ಮೊದಲು ವೈಧ್ಯರಿಂದ ಪ್ರಮಾಣ ಪತ್ರ ಪಡೆದುಕೊಂಡಿರುವುದಿಲ್ಲ.

ಅಪಘಾತ ಆಗುವ ಸಮಯದಲ್ಲಿ ಕೆಟಿಎಂ–200 ಮೋಟಾರ್ ಬೈಕ್ ಅನ್ನು ನಾನೇ ಚಾಲನೆ ಮಾಡುತ್ತಿದ್ದೆ. ಕೆಟಿಎಂ ಬೈಕ್ ಸ್ಪೋರ್ಟ್ಸ್ ಬೈಕ್ ಆಗಿದ್ದು ಅದರ ವೇಗ ಹೆಚ್ಚಾಗಿ ಇರುತ್ತದೆ ಎಂದರೆ ಸಾಕ್ಷಿಯು ಡಿ.ಹೆಚ್.ಪಿ ಜಾಸ್ತಿ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ಡಿ.ಹೆಚ್.ಪಿ. ಜಾಸ್ತಿ ಆದಾಗ ಬೈಕ್ ನ ಪವರ್ ಹೆಚ್ಚಾಗುತ್ತದೆ ಎಂದರೆ ಸರಿ. ಆ ದಿನ ಬೈಕ್ ನಲ್ಲಿ ನನ್ನ ಜೊತೆ ನನ್ನ ಸ್ನೇಹಿತ ಇದ್ದನು. ಲಾರಿಯು ಸೈಡ್ ನಿಂದ ಬಂದು ಡಿಕ್ಕಿ ಪಡಿಸಿರುತ್ತದೆ. ಅಪಘಾತ ಸ್ಥಳದಲ್ಲಿ ಬೆಮೆಲ್ ಗೆ ಹೋಗುವ ರಸ್ತೆ ಇದೆ ಎಂದರೆ ಸರಿ. ನಾನು ಲಾರಿಯ ಬಲಗಡೆ ಇದ್ದೆ ಎಂದರೆ ಸರಿ. ಲಾರಿ ಬೆಮೆಲ್ ಕಡೆಗೆ ಹೋಗಲು ತಿರುಗಿಸುವಾಗ ನಾನು ಅತಿವೇಗದಿಂದ ಬಂದು ಬೈಕ್ ಅನ್ನು ನಿಯಂತ್ರಿಸಲಾಗದೆ ಲಾರಿಗೆ ಡಿಕ್ಕಿ ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಲಾರಿ ನನ್ನನ್ನು ಬಂದು

ಹಿಂದುಗಡೆಯಿಂದ ಅಪಘಾತ ಪಡಿಸಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ತಲೆಗೆ, ಮುಖಕ್ಕೆ, ಎಡಗಾಲಿಗೆ ಪೆಟ್ಟಾಗಿರುತ್ತದೆ. ಆ ದಿನ ನಾನು ಹೆಲ್ಮೆಟ್ ದರಿಸಿದ್ದೆ. ನಾನು ಆ ದಿನ ಹೆಲ್ಮೆಟ್ ಧರಿಸದೇ ಅತಿವೇಗವಾಗಿ ಹೋಗಿ ಲಾರಿಗೆ ಡಿಕ್ಕಿ ಪಡಿಸಿದ ಕಾರಣ ನನ್ನ ಮುಖಕ್ಕೆ ಪೆಟ್ಟಾಗಿರುತ್ತದೆ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ಪೋಲೀಸರ ಜೊತೆ ಶಾಮಿಲಾಗಿ ಲಾರಿಯವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಡಿ.ಎಲ್ ಪಡೆದುಕೊಂಡು 7 ವರ್ಷದ ಮೇಲೆ ಆಗಿರುತ್ತದೆ. ನನಗೆ ರಸ್ತೆ ನಿಯಮಗಳ ಬಗ್ಗೆ ಚೆನ್ನಾಗಿ ಗೊತ್ತಿರುತ್ತದೆ. ಯಾವುದೇ ವಾಹನ ನಾವು ಚಾಲನೆ ಮಾಡಿಕೊಂಡು ಹೋಗುವಾಗ ರಸ್ತೆಯ ಎಡಭಾಗಕ್ಕೆ ಹೋಗಬೇಕು ಎಂದರೆ ಸರಿ. ನಾನು ಆ ದಿನ ರಸ್ತೆಯ ಎಡಭಾಗದಲ್ಲಿ ಹೋಗುತ್ತಿದ್ದರೆ ಅಪಘಾತ ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಲಾರಿಯನ್ನು ಹಿಂದಿಕ್ಕಲು ಬಲಭಾಗದಿಂದ ಹೋಗಿ ಡಿಕ್ಕಿ ಪಡಿಸಿ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ನನಗೆ ಚಾಲನ ಪರವಾನಗಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ಔಷಧಿ ಪಾವತಿ ರಶೀದಿಗಳನ್ನು ಈಗಾಗಲೇ ಇ.ಎಸ್ ಐ ನಿಂದ ಮರುಪಾವತಿ ಪಡೆದುಕೊಂಡ ಕಾರಣ ಈ ನ್ಯಾಯಾಲಯದಿಂದ ವೈಧ್ಯಕೀಯ ವೆಚ್ಚ ನೀಡಲು ಬರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಕೆಲಸವನ್ನು ನಾನು ಮುಂದುವರಿಸಿದ ಕಾರಣ ನನಗೆ ಅಪಘಾತದಿಂದ ಯಾವುದೇ ತೊಂದರೆ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.